# ಪತ್ರಿಕಾ ಪ್ರಕಟಣೆ

# ಬೆಂಗಳೂರು ಪ್ರೈಡ್ ಮತ್ತು ಕರ್ನಾಟಕ ಕ್ವಿಯರ್ ಹಬ್ಬ ೨೦೧೧

## ನವೆಂಬರ್ ೧೯ - ನವೆಂಬರ್ ೨೭, ೨೦೧೧

ಲೈಂಗಿಕ ಅಲ್ಪಸಂಖ್ಯಾತರ ಸಮೂಹ* ನಾಲ್ಕನೇ ವಾರ್ಷಿಕ ಕ್ವಿಯರ್ ಪ್ರೈಡ್ ಅನ್ನು ಬೆಂಗಳೂರಿನಲ್ಲಿ ಘೋಷಿಸುತ್ತದೆ. ಪ್ರೈಡ್ ಆಚರಣೆಗಳು, ಲೈಂಗಿಕ ಅಲ್ಪಸಂಖ್ಯಾತರ ಬಾಳನ್ನು ಸುಧಾರಿಸಿರುವ ಸ್ಥಳೀಯ, ರಾಷ್ಟ್ರೀಯ, ಮತ್ತು ಜಾಗತಿಕ ಮಟ್ಟದ, ಸಾಮಾಜಿಕ ಹಾಗು ರಾಜಕೀಯ ಬದಲಾವಣೆಗಳನ್ನು ಗುರುತಿಸಲು ಒಂದು ಅವಕಾಶ. ನಮ್ಮನ್ನು ಈ ಹಂತಕ್ಕೆ ತಂದ ಉಗ್ರ ಹೋರಾಟವನ್ನು ನೆನಪಿಸಿಕೊಳ್ಳಲು ಇದು ಒಂದು ಸಂದರ್ಭ; ಹಾಗೇ ಸಾಮಾಜಿಕ ಅನ್ಯಾಯ, ಅನ್ಯದ್ವೇಷ, ಹಾಗು ವೈರಕ್ಕೆ ಬಲಿಯಾದ ಜೀವಗಳ ಸ್ಮರಣೆಗೆ ಅವಕಾಶ.

ನಾವು ಯಾರು? ನಮ್ಮ ಸಮುದಾಯ ವೈವಿಧ್ಯಪೂರ್ಣವಾದದ್ದು, ನಮ್ಮ ದೇಶದ ಹಾಗೆ. ನಾವು ಸ್ತ್ರೀ ಮತ್ತು ಪುರುಷ ಸಲಿಂಗಿಗಳು (ಲೆಸ್ಬಿಯನ್ ಮತ್ತು ಗೇ), ದ್ವಿಲಿಂಗಿಗಳು, ಮತ್ತು ಟ್ರಾನ್ಸ್‌ಜೆಂಡರ್-ಗಳು, ಹಿಜಡಾಗಳು ಮತ್ತು ಕೋತಿಗಳು, ಹೆಂಗಸು-ಇಂದ-ಗಂಡಸು ಮತ್ತು ಗಂಡಸು-ಇಂದ-ಹೆಂಗಸು ಟ್ರಾನ್ಸ್‌ಜೆಂಡರ್-ಗಳು, ಜೋಗಪ್ಪಗಳು ಮತ್ತು ಶಿವಶಕ್ತಿಗಳು, ಹೆಣ್ಣಿಗ ಗಂಡಸರು ಮತ್ತು ಗಂಡುಬೀರಿ ಹೆಂಗಸರು, ಗಂಡುಬೀರಿ ಗಂಡಸರು ಮತ್ತು ಹೆಣ್ಣಿಗ ಹೆಂಗಸರು, ಗಂಡಸು ಅಥವ ಹೆಂಗಸು ಆಗಿರಲು ಬಯಸದವರು, ಅಥವ ಕೆಲವೊಮ್ಮೆ ಎರಡೂ ಆಗಲು ಬಯಸುವವರು, ಮತ್ತು ಲಿಂಗದ ಕಾರಣದಿಂದ ತಮ್ಮಿಂದ ಇರುವ ಅಪೇಕ್ಷೆಗಳಿಂದಾಗಿ ಉಸಿರುಗಟ್ಟಿ ಈ ಯಾವುದೇ ಹಣೆಪಟ್ಟಿಗಳೇ ಬೇಡ ಎನ್ನುವವರು. ಈ ಅಗೋಚರತೆಯ ಕಡೆಗಣಿಕೆಯನ್ನು ತಿರಸ್ಕರಿಸಲು, ನಾವೂ ಇಲ್ಲೇ ಇದ್ದೇವೆ ಮತ್ತು ಸದಾ ಇರಲಿದ್ದೇವೆಂದು ಹಿಗ್ಗಲು ಬೆಂಗಳೂರು ಪ್ರೈಡ್ ನಮಗೊಂದು ಅವಕಾಶ.

ನಮ್ಮ ಧ್ವನಿ, ನಾವು ನಾವೇ ಆಗಿ ಇರುವ ಹಕ್ಕು ಮತ್ತು ನಮ್ಮ ಪೌರತ್ವವನ್ನು ಸಹ ಕಸಿದುಕೊಳ್ಳಲಾಗಿದೆ. ಆದರೆ ಸೋಲುವ ಯುದ್ಧವನ್ನೇನು ನಾವು ಮಾಡುತ್ತಿಲ್ಲ. ಸಧ್ಯಕ್ಕೆ ಸೆಕ್ಷನ್ 377 ನ ಭಯವಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಲೆಸ್ಬಿಯನ್-ಗಳು, ಗೇ-ಗಳು, ಕೋತಿಗಳು, ಮತ್ತು ದ್ವಿಲಿಂಗಿಗಳು ಪ್ರತಿ ದಿನ ತಮ್ಮ ಲೈಂಗಿಕತೆಯನ್ನು ತಮ್ಮ ಕುಟುಂಬವರ್ಗ, ಸ್ನೇಹಿತರು ಮತ್ತು ಸಹೋದ್ಯೋಗಿಗಳಲ್ಲಿ ಪ್ರಕಟಪಡಿಸುತ್ತಿದ್ದಾರೆ. ಹಿಜಡಾಗಳಿಗೆ ಒಂದು ಕ್ಷೇಮಾಭಿವೃದ್ಧಿ ಸಂಘವನ್ನು ತೆರೆಯಲಾಗಿದೆ ಮತ್ತು ಕರ್ನಾಟಕದಲ್ಲಿ ಅವರಿಗೆ ಪಿಂಚಣಿ, ವಸತಿ, ಮತ್ತು ಮತದಾರರ ಗುರುತಿನ ಚೀಟಿಗಳ ಬಗ್ಗೆ ಚರ್ಚಿಸಲಾಗುತ್ತಿದೆ. ಬಹಳಷ್ಟು ಸಲಿಂಗಿ ಜೋಡಿಗಳು ಒಟ್ಟಿಗೆ ಜೀವನ ನಡೆಸುತ್ತಿದ್ದಾರೆ. ನಮ್ಮ ಹೋರಾಟಗಳಲ್ಲಿ ಮಾಧ್ಯಮ ಆಶ್ಚರ್ಯಕರ ರೀತಿಯಲ್ಲಿ ಬೆಂಬಲಕ್ಕಿದೆ. ಇದೆಲ್ಲಾ ಆಚರಣೆಗೆ ಕಾರಣ.

ಪ್ರೈಡ್ ಹಬ್ಬಗಳು ಭಾಗಶಃ ಆಚರಣೆ - ನಾವು ಯಾರೆಂಬ ಆಚರಣೆ, ಜಗತ್ತಿಗೆ ನಮ್ಮ ಅಸ್ತಿತ್ವವನ್ನು ಸಾರಿ ಹೇಳಲು, ನಮ್ಮ ಜೀವನಗಳನ್ನು ನಾವೇ ನಿರ್ಧರಿಸುವ ಹಕ್ಕೊತ್ತಾಯ, ಹಾಗು, ಕುಟುಂಬವರ್ಗ ಅಥವ ಸ್ನೇಹಿತರಿಗೆ ಹೇಳಿಕೊಳ್ಳುವುದು ಒತ್ತಟ್ಟಿಗಿರಲಿ, ತಮ್ಮ ಲೈಂಗಿಕತೆ ಮತ್ತು ಲಿಂಗದ ಗುರುತನ್ನು ತಾವೇ ಒಪ್ಪಿಕೊಳ್ಳಲು ಹೆದರಿದ, ಬೆದರಿಸಲ್ಪಟ್ಟ ಲಕ್ಷಾಂತರ ಮಂದಿಗೆ ಧೈರ್ಯ ತುಂಬಲು ಇದು ಒಂದು ಅವಕಾಶ. ಪ್ರೈಡ್ ಒಂದು ಪ್ರತಿಭಟನೆ ಕೂಡ – ದೇಶ ಮತ್ತು ಸಮಾಜದ ದಬ್ಬಾಳಿಕೆ ಹಾಗು ಭೇದಭಾವದ ವಿರುದ್ಧ, ಮೂಲ ಸ್ವಾತಂತ್ರ್ಯಗಳು ಹಾಗು ಹಕ್ಕುಗಳ ನಿತ್ಯ ನಿರಾಕರಣೆಯ ವಿರುದ್ಧ, ಸಮಾನ ಆಲೋಚನೆ, ಶೈಲಿ, ಹಾಗು ವರ್ತನೆಯ ಅಪೇಕ್ಷೆಯ ವಿರುದ್ಧ.

ಬೆಂಗಳೂರು ಪ್ರೈಡ್ ೨೦೧೧ ನವೆಂಬರ್ ೧೯ರಿಂದ ನವೆಂಬರ್ ೨೭ರ ತನಕ ನಡೆಯಲಿದೆ; ಹಾಗು ಭಾನುವಾರ ನವೆಂಬರ್ ೨೭ರಂದು ೨ pm ನಂತರ ಸಾಂಪ್ರದಾಯಿಕ ಪ್ರೈಡ್ ನಡಿಗೆಯೊಂದಿಗೆ ಮುಕ್ತಾಯವಾಗಲಿದೆ. ನೀವು ಲೈಂಗಿಕ ಅಥವ ಲಿಂಗ ಅಲ್ಪಸಂಖ್ಯಾತರೆಂದು ಗುರುತಿಸಿಕೊಂಡಲ್ಲಿ, ಅಥವ ನಮ್ಮ ಹಕ್ಕುಗಳ ಬೆಂಬಲಿಗರಾಗಿದ್ದಲ್ಲಿ , ದಯವಿಟ್ಟು ಭಾಗವಹಿಸಿ. ಸ್ನೇಹಿತರು, ನಂಬಿಕಸ್ತರು, ಬಂಧುಗಳಿಗೂ ಸಹ ಸ್ವಾಗತವಿದೆ.

ಕಾರ್ಯಕ್ರಮಗಳು:

- ನವೆಂಬರ್ ೧೯, ಶನಿವಾರ – ಕ್ವಿಯರಿಂಗ್ ದಿ ಪಿಚ್ – ವಿಲ್ಸನ್ ಗಾರ್ಡನ್ನಿನ ಹೊಂಬೇಗೌಡ ಮೈದಾನದಲ್ಲಿ ಕ್ರಿಕೆಟ್ ಪಂದ್ಯ, ೧೦ am ನಂತರ.
- ನವೆಂಬರ್ ೨೦, ಭಾನುವಾರ – ಧನ ಸಂಗ್ರಹಕ್ಕಾಗಿ ಗರಾಜ್ ಮಾರಾಟ, ಆಲ್ಟರ್ನೇಟಿವ್ ಲಾ ಫೋರಂ (ಇನ್ಫ್ಯಾಂಟ್ರಿ

ರಸ್ತೆಯಲ್ಲಿ), ೧೦ am - ೬ pm.

- ನವೆಂಬರ್ ೨೨, ಮಂಗಳವಾರ - ಅಂತರರಾಷ್ಟ್ರೀಯ ಟ್ರಾನ್ಸ್ ಜೆಂಡರ್ ನೆನಪಿನ ದಿನ (International Transgender Day of Remembrance) – ಟೌನ್ ಹಾಲ್ ಬಳಿ ಮೇಣದಬತ್ತಿ ಬೆಳಕಿನ ಪಹರೆ, ೫:೩೦ pm – ೬:೩೦ pm.
- ನವೆಂಬರ್ ೨೩, ಬುಧವಾರ – ಆಲ್ಟರ್ನೇಟಿವ್ ಲಾ ಫೋರಂ (ಇನ್ಫಾಂಟ್ರಿ ರಸ್ತೆಯಲ್ಲಿ) ಭಿತ್ತಿಪತ್ರಗಳ ತಯಾರಿಕೆ ೨ pm - ೮ pm
- ನವೆಂಬರ್ ೨೪, ಗುರುವಾರ - ಕ್ವಿಯರ್ ಚಲನಚಿತ್ರಗಳ ಪ್ರದರ್ಶನ, ಸ್ವಭಾವ ಕಾರ್ಯಾಲಯದಲ್ಲಿ, ೬ pm - ೯ pm
- ನವೆಂಬರ್ ೨೫, ಶುಕ್ರವಾರ – ಸಲಿಂಗ ಮದುವೆ: ವಿಮರ್ಶೆ, ಅಥವ ಮುಂದಿನ ದಾರಿ? (ಚರ್ಚಾಕೂಟ), ಇನ್ಫಾಂಟ್ರಿ ರಸ್ತೆಯ ವಿಶ್ರಾಂತಿ ನಿಲಯದಲ್ಲಿ, ೫ pm - ೮ pm
- ನವೆಂಬರ್ ೨೬, ಶನಿವಾರ – "ವಿವಿಧತೆಯ ಮೇಳ", ಮಳಿಗೆಗಳು ಮತ್ತು ಅಭಿನಯಗಳೊಂದಿಗೆ, ರೊಕೊಕೊ ಗ್ಯಾಲೆರಿ (೧೧, ರೆಸ್ಟ್ ಹೌಸ್ ರಸ್ತೆ, ಬ್ರಿಗೇಡ್ ರಸ್ತೆಯ ಪಕ್ಕ, ದುಬೈ ಪ್ಲಾಜಾದಿಂದ ಮುಂದೆ), ೧೦ am - ೬ pm
- ನವೆಂಬರ್ ೨೭, ಭಾನುವಾರ - "ಪ್ರೈಡ್ ನಡಿಗೆ"!! ಮೆಜೆಸ್ಟಿಕ್ ಬಸ್ ನಿಲ್ದಾಣದ ಪಕ್ಕ ಇರುವ ತುಳಸಿ ತೋಟದ ಬಳಿ (ಶಾಂತಲಾ ಸಿಲ್ಕ್ ಹೌಸ್ ಹತ್ತಿರ), ೨ pm ಕ್ಕೆ ನಾವು ಸೇರಿ, ಟೌನ್ ಹಾಲ್ ಕಡೆಗೆ ನಡಿಗೆ ಕೈಗೊಳ್ಳುತ್ತೇವೆ!

ಹೆಚ್ಚಿನ ಮಾಹಿತಿ ಮತ್ತು ಬದಲಾದ ಸಮಯ/ಸ್ಥಳಗಳ ಬಗ್ಗೆ ತಿಳಿಯಬಹುದಾದ ಬೆಂಗಳೂರು ಪ್ರೈಡ್ ೨೦೧೧ ಅಂತರ್ಜಾಲ ತಾಣ:
www.bangalorepride.com
ಮಿಂಚೆ: bangalorepride2011@gmail.com

ಅಥವ ಕರೆ ಮಾಡಿ:
ಸುನಿಲ್ ಮೋಹನ್ (+91 9886788203; sun.sunil23@gmail.com)
**ಸೌಮ್ಯ ರೆಡ್ಡಿ** (+91 9686018042; sowmyareddyr@gmail.com)
ನಂಜು ರೆಡ್ಡಿ (+91 9972817406; nanju.reddy@gmail.com)
ಕರೀಂ ಖುಬ್ಚಂದಾನಿ (+91 9945604590; kareem.khubchandani@gmail.com)
ವಿನಯ್ ಚಂದ್ರನ್ (+91 9844181294; vinu228@yahoo.com)

* ಲೈಂಗಿಕ ಅಲ್ಪಸಂಖ್ಯಾತರ ಸಮೂಹ - Coalition for Sexual Minority Rights (CSMR) ಒಳಗೊಂಡಿರುವ ಸರ್ಕಾರೇತರ ಮತ್ತು ಸ್ವತಂತ್ರ ಸಂಸ್ಥೆಗಳು: ಸಂಗಮ, ಸಮರ, ಗುಡ್ ಆಸ್ ಯು, WHaQ!, ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ಫೋರಂ, ಕರ್ನಾಟಕ ಲೈಂಗಿಕ ಕಾರ್ಯಕರ್ತರ ಸಂಘ, LesBiT, ಮತ್ತು ಸ್ವಭಾವ.

(ಈ ಲಾಂಛನದ ಉತ್ತಮ ಪ್ರತಿಗಳಿಗೆ ಕರೀಂ ಅವರ ಮೇಲೆ ತಿಳಿಸಿರುವ ಮಿಂಚೆಗಾದರೂ ಬರೆಯಿರಿ, ಅಥವ ಬೆಂಗಳೂರು ಪ್ರೈಡ್ ೨೦೧೧ ಅಂತರ್ಜಾಲ ತಾಣದಲ್ಲಾದರೂ ಪಡೆಯಿರಿ)